# National
# Kannada
# 11.03.2026 19.35 hrs
# ಆಕಾಶವಾಣಿ, ಬೆಂಗಳೂರು

## ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಕೇರಳ, ತಮಿಳುನಾಡಿನಲ್ಲಿ ಸುಮಾರು 15 ಸಾವಿರ ಕೋಟಿ ರೂಪಾಯಿ ಮೊತ್ತದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಪ್ರಧಾನಮಂತ್ರಿ ನರೇಂದ್ರ ಮೋದಿ ಚಾಲನೆ
2. ಲೋಕಸಭಾಧ್ಯಕ್ಷರ ಸಮಗ್ರತೆ ಪ್ರಶ್ನಾತೀತ – ಗೃಹ ಸಚಿವ ಅಮಿತ್ ಶಾ
3. ದೇಶದ ಕಚ್ಚಾ ತೈಲ ಪೂರೈಕೆ ಸ್ಥಿತಿ ಭದ್ರ – ಸರ್ಕಾರದ ಸ್ಪಷ್ಟನೆ
4. ಎಫ್ಐಎಚ್ ಮಹಿಳಾ ಹಾಕಿ ವಿಶ್ವಕಪ್ 2026ರ ಅರ್ಹತಾ ಪಂದ್ಯಾವಳಿ ಭಾರತ– ವೇಲ್ಸ್ ಮುಖಾಮುಖಿ

***************

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಕೇರಳದ ಎರ್ನಾಕುಲಂನಲ್ಲಿ ಇಂದು 10 ಸಾವಿರದ 800 ಕೋಟಿ ರೂಪಾಯಿ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿದರು.

ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್‌ನ ಕೊಚ್ಚಿ ರಿಫೈನರಿಯಲ್ಲಿ ಪಾಲಿಪ್ರೊಪಿಲೀನ್ ಘಟಕಕ್ಕೆ ಶಂಕುಸ್ಥಾಪನೆ ನೆರವೇರಿಸಿದರು. ವಾಹನ ಘಟಕ,ವೈದ್ಯಕೀಯ ಉಪಕರಣ, ಜವಳಿ ಮತ್ತು ಗೃಹ ಬಳಕೆ ಉತ್ಪನ್ನಗಳಿಗೆ ಪಾಲಿಪ್ರೊಪಿಲೀನ್ ಅಗತ್ಯ ಸಾಮಗ್ರಿಯಾಗಿದೆ. ಸುಮಾರು 5 ಸಾವಿರದ 500 ಕೋಟಿ ರೂಪಾಯಿ ವೆಚ್ಚದ ಈ ಯೋಜನೆ ವಾರ್ಷಿಕ 400 ಕಿಲೊ ಟನ್ ಪಾಲಿಪ್ರೊಪಿಲೀನ್ ಉತ್ಪಾದಿಸುವ ಸಾಮರ್ಥ್ಯ ಹೊಂದಿರುತ್ತದೆ.

ಪ್ರಧಾನಿ ಅವರು ಇದೇ ಸಂದರ್ಭದಲ್ಲಿ ಎರಡು ಬೃಹತ್ ಹೆದ್ದಾರಿ ಯೋಜನೆಗಳನ್ನು ಉದ್ಘಾಟಿಸಿದರು. 2 ಸಾವಿರದ 650 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿರುವ ರಾಷ್ಟ್ರೀಯ ಹೆದ್ದಾರಿ 66ರ ತಲಪಾಡಿ– ಚೆಂಗಲ ವಿಭಾಗದ ಷಟ್ಪಥ ರಸ್ತೆ ಸೌಕರ್ಯವನ್ನು ಲೋಕಾರ್ಪಣೆ ಮಾಡಿದರು.

ಕಾಸರಗೋಡು ಮತ್ತು ಕಣ್ಣೂರು ಜಿಲ್ಲೆ ಮತ್ತು ನೆರೆಯ ಮಂಗಳೂರು ಹಾಗೂ ಮುಜಾಪಿಲಾಂಗಡ ನಡುವಿನ ರಸ್ತೆ ಸಂಪರ್ಕವನ್ನು ಬಲಗೊಳಿಸಲಿದ್ದು, ಇದು ಮುಂಬೈ–ಕನ್ಯಾಕುಮಾರಿ ಆರ್ಥಿಕ ಕಾರಿಡಾರ್‌ನ ಭಾಗವಾಗಿದೆ.

ವಂಗಲಮ್–ರಾಮನಟ್ಟುಕಾರ ನಡುವಿನ ಷಟ್ಪಥ ಕೋಝಿಕೋಡ್ ಬೈಪಾಸ್ ಯೋಜನೆಯನ್ನು ಪ್ರಧಾನಿ ಅವರು ಸಮರ್ಪಣೆ ಮಾಡಿದ್ದು, ಇದನ್ನು 2 ಸಾವಿರದ 140 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

***************

ಪ್ರಧಾನಿ ನರೇಂದ್ರ ಮೋದಿ ತಮಿಳುನಾಡಿನ ತಿರುಚಿರಪಳ್ಳಿಯಲ್ಲಿ ಈ ಸಂಜೆ 5 ಸಾವಿರದ 650 ಕೋಟಿ ರೂಪಾಯಿ ಮೊತ್ತದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಲೋಕಾರ್ಪಣೆ ನೆರವೇರಿಸಿದರು.

ಎರಡು ಅಮೃತ್ ಭಾರತ್ ಎಕ್ಸ್‌ಪ್ರೆಸ್ ಸೇರಿದಂತೆ ಒಟ್ಟು ಐದು ಹೊಸ ರೈಲು ಸಂಚಾರಕ್ಕೆ ಹಸಿರು ನಿಶಾನೆ ತೋರಿಸಿದರು.

ಭಾರತ ಪೆಟ್ರೋಲಿಯಂ ಕಾರ್ಪೋರೇಷನಿನ ಅನಿಲ ವಿತರಣೆ ಜಾಲ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿದರು.

***************

ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರ ಪದಚ್ಯುತಿ ಕುರಿತ ಪ್ರತಿಪಕ್ಷಗಳ ನಿರ್ಣಯದ ಬಗ್ಗೆ ಇಂದು ಚರ್ಚೆ ನಡೆಯಿತು.

ಹಿರಿಯ ಬಿಜೆಪಿ ಧುರೀಣ ಹಾಗೂ ಗೃಹ ಸಚಿವ ಅಮಿತ್ ಶಾ ಮಾತನಾಡಿ, ಸಭಾಧ್ಯಕ್ಷರ ಸಮಗ್ರತೆಯನ್ನು ವಿರೋಧ ಪಕ್ಷಗಳು ಪ್ರಶ್ನಿಸುತ್ತಿರುವುದು ದುರದೃಷ್ಟಕರ ಸಂಗತಿ ಎಂದರು.

ಸುಮಾರು 4 ದಶಕಗಳ ನಂತರ ಲೋಕಸಭಾಧ್ಯಕ್ಷರ ವಿರುದ್ಧ ಪ್ರತಿಪಕ್ಷಗಳು ಅವಿಶ್ವಾಸ ಸೂಚನೆ ತಂದಿದ್ದು, ಸಂಸದೀಯ ರಾಜಕೀಯಕ್ಕೆ ಮತ್ತು ಸದನಕ್ಕೆ ವಿಷಾದನೀಯ ಸಂಗತಿಯಾಗಿದೆ ಎಂದರು.

ಲೋಕಸಭಾಧ್ಯಕ್ಷರು ಯಾವುದೇ ರಾಜಕೀಯ ಪಕ್ಷಕ್ಕೆ ಸೀಮಿತವಾಗಿರದೆ ಇಡೀ ಸದನಕ್ಕೆ ಸೇರಿದವರಾಗಿರುತ್ತಾರೆ ಎಂದು ಅಮಿತ್ ಶಾ ಪ್ರತಿಪಾದಿಸಿದರು. ಬಿಜೆಪಿ ಮತ್ತು ಎನ್‌ಡಿಎ ಲೋಕಸಭಾಧ್ಯಕ್ಷರ ವಿರುದ್ಧ ಎಂದೂ ಅವಿಶ್ವಾಸ ಸೂಚನೆ ತಂದಿಲ್ಲ. ಲೋಕಸಭಾಧ್ಯಕ್ಷರ ಸಮಗ್ರತೆ ಪ್ರಶ್ನಾತೀತ ಎನ್ನುವುದು ತಮ್ಮ ನಂಬಿಕೆಯಾಗಿದೆ ಎಂದು ಅವರು ಹೇಳಿದರು.

ಧ್ವನಿ: ಅಮಿತ್ ಶಾ

ಪರಸ್ಪರ ನಂಬಿಕೆ ಹಾಗೂ ನಿಯಮಗಳ ಆಧಾರದ ಮೇಲೆ ಸದನದ ಕಲಾಪಗಳನ್ನು ನಡೆಸಲಾಗುತ್ತದೆ. ಸಭಾಧ್ಯಕ್ಷರು ಆಡಳಿತ ಹಾಗೂ ವಿಪಕ್ಷ ಎರಡನ್ನೂ ಪ್ರತಿನಿಧಿಸುತ್ತಾರೆ. ಸದಸ್ಯರು ನಿಯಮಾವಳಿಗಳ ಪ್ರಕಾರ ಕಲಾಪದಲ್ಲಿ ಭಾಗಿಯಾಗಬೇಕಾಗುತ್ತದೆ ಎಂದರು.

ಲೋಕಸಭೆಯ ನಿಯಮಾವಳಿ ಪ್ರಕಾರ, ಲೋಕಸಭಾಧ್ಯಕ್ಷರ ನಿರ್ಣಯ ಅಂತಿಮವಾಗಿದೆ ಎಂದು ಅವರು ಹೇಳಿದರು. ವಿಶ್ವ ಭಾರತದ ಪ್ರಜಾತಂತ್ರ ವ್ಯವಸ್ಥೆಯ ಬಲ ಹಾಗೂ ಘನತೆಯನ್ನು ಗುರುತಿಸಿದೆ. ಸದನದ ಪಾಲಕರ ವಿರುದ್ಧ ಮಾಡುವ ಆಪಾದನೆಗಳು ಪ್ರಜಾತಂತ್ರ ಪ್ರಕ್ರಿಯೆಯನ್ನೇ ಪ್ರಶ್ನಿಸುವಂತಿದೆ ಎಂದು ಅಮಿತ್ ಶಾ ಹೇಳಿದರು.

ಇದಕ್ಕೂ ಮುನ್ನ ಚರ್ಚೆಯಲ್ಲಿ ಪಾಲ್ಗೊಂಡ ರವಿಶಂಕರ್ ಪ್ರಸಾದ್, ಪ್ರತಿಪಕ್ಷಗಳ ಕೆಲವು ನಾಯಕರ ಹಿತಾಸಕ್ತಿಗಾಗಿ ಈ ನಿರ್ಣಯವನ್ನು ಮಂಡಿಸಲಾಗಿದೆ ಎಂದರು.

ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಮಾತನಾಡಿ, ತಮ್ಮನ್ನು ಅನೇಕ ಬಾರಿ ಸದನದಲ್ಲಿ ಮಾತನಾಡದಂತೆ ತಡೆಯಲಾಗಿದೆ ಎಂದು ಆಪಾದಿಸಿದರು. ಸದನ ಒಂದು ಪಕ್ಷಕ್ಕೆ ಸೇರಿದ್ದಲ್ಲ, ಇಡೀ ದೇಶಕ್ಕೆ ಸೇರಿದ್ದು ಎಂದರು.

ಕಾಂಗ್ರೆಸ್‌ನ ಕೆ.ಸಿ.ವೇಣುಗೋಪಾಲ್, ಸಮಾಜವಾದಿ ಪಕ್ಷದ ಆನಂದ್ ಬದೂರಿಯಾ, ಬಿಜೆಪಿಯ ಅನುರಾಗ್ ಸಿಂಗ್ ಠಾಕೂರ್, ಜೆಡಿಎಸ್‌ನ ಮಲ್ಲೇಶ್ ಬಾಬು ಚರ್ಚೆಯಲ್ಲಿ ಪಾಲ್ಗೊಂಡಿದ್ದರು

***************

ಚಾಲಕರಿಗೆ ಆದಾಯ ಖಾತರಿಪಡಿಸುವ ಉದ್ದೇಶದಿಂದ ಸಹಕಾರಿ ಮಾದರಿಯ ಭಾರತ್ ಟ್ಯಾಕ್ಸಿ ಆರಂಭಿಸಲಾಗಿದೆ ಎಂದು ಕೇಂದ್ರ ಸಹಕಾರಿ ಖಾತೆ ರಾಜ್ಯ ಸಚಿವ ಕೃಷ್ಣಪಾಲ್ ಹೇಳಿದ್ದಾರೆ.

ಅವರು ರಾಜ್ಯಸಭೆಯಲ್ಲಿಂದು ಪ್ರಶ್ನೆಯೊಂದಕ್ಕೆ ಉತ್ತರ ನೀಡಿ, ಇದು ಯುವಜನತೆಗೆ ಉದ್ಯೋಗ ಅವಕಾಶ ಕಲ್ಪಿಸುವುದರ ಜೊತೆಗೆ ಆದಾಯವನ್ನು ತಂದು ಕೊಡುತ್ತದೆ. ಪ್ರಯಾಣಿಕರಿಗೂ ಕೂಡ ಕೈಗೆಟಕುವ ಹಾಗೂ ನಂಬಿಕಾರ್ಹ ಟ್ಯಾಕ್ಸಿ ಸೇವೆಯನ್ನು ಒದಗಿಸುತ್ತದೆ ಈ ಸಹಕಾರಿ ಮಾದರಿಯಲ್ಲಿ ಚಾಲಕರು ಗಳಿಸುವ ಹಣ, ನೇರವಾಗಿ ಅವರ ಸ್ವಂತ ಖಾತೆಗೆ ಜಮೆಯಾಗುತ್ತದೆ ಎಂದು ಅವರು ತಿಳಿಸಿದರು.

ಮೊಬೈಲ್ ಅಪ್ಲಿಕೇಷನ್ ಮೂಲಕ ಭಾರತ್ ಟ್ಯಾಕ್ಸಿ ಬುಕ್ಕಿಂಗ್ ಮಾಡಬಹುದಾಗಿದ್ದು, ಬಳಕೆದಾರರಿಗೂ ಅನುಕೂಲಕರವಾಗಿದೆ ಇದು, ಸುರಕ್ಷತೆ ಹಾಗೂ ಪಾರದರ್ಶಕ ಕ್ರಮಗಳನ್ನು ಒಳಗೊಂಡಿದೆ ಎಂದು ಸಚಿವ ಕೃಷ್ಣಪಾಲ್ ತಿಳಿಸಿದರು.

***************

ದೇಶದ ಕಚ್ಚಾ ತೈಲ ಪೂರೈಕೆ ಸ್ಥಿತಿ ಭದ್ರವಾಗಿದೆ ಎಂದು ಪೆಟ್ರೋಲಿಯಂ ಹಾಗೂ ನೈಸರ್ಗಿಕ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತ ಶರ್ಮಾ ತಿಳಿಸಿದ್ದಾರೆ.

ಅವರು ದೆಹಲಿಯಲ್ಲಿಂದು ಪಶ್ಚಿಮ ಏಷ್ಯ ವಿದ್ಯಮಾನಗಳ ಬಗ್ಗೆ ಸುದ್ದಿಗಾರರಿಗೆ ವಿವರ ನೀಡಿ, ಆಮದು ಮಾಡಿಕೊಳ್ಳಲಾಗುತ್ತಿರುವ ಶೇಕಡ 70ರಷ್ಟು ಕಚ್ಚಾ ತೈಲ ಹೊರ್ಮುಜ್ ಖಾರಿಯಿಂದ ಹೊರಗೆ ಬರುತ್ತಿದೆ ಎಂದು ತಿಳಿಸಿದರು.

ಭಾರತ 40 ದೇಶಗಳಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ಎರಡು ಎಲ್‌ಎನ್‌ಜಿ ಸರಕು ಹಡಗು ಭಾರತಕ್ಕೆ ಬರುತ್ತಿದೆ ಎಂದು ಹೇಳಿದರು.

***************

ಪಶ್ಚಿಮ ಏಷ್ಯಾ ಸಂಘರ್ಷ ಕುರಿತಂತೆ ವಿದೇಶಾಂಗ ವ್ಯವಹಾರಗಳ ಸಚಿವ ಡಾ.ಎಸ್.ಜೈಶಂಕರ್ ಫ್ರಾನ್ಸಿನ ವಿದೇಶಾಂಗ ಸಚಿವ ಜೀನ್–ನೋವೆಲ್ ಬರೂಟ್ ಹಾಗೂ ರಷ್ಯಾದ ವಿದೇಶಾಂಗ ಖಾತೆ ಸಚಿವ ಸರ್ಗೆ ಲೆವ್‌ರೋವ್ ಅವರೊಂದಿಗೆ ಪರಾಮರ್ಶೆ ನಡೆಸಿದರು.
ರಷ್ಯಾದ ವಿದೇಶಾಂಗ ಸಚಿವರೊಂದಿಗೆ ರಾಜತಾಂತ್ರಿಕ ಪ್ರಯತ್ನಗಳ ಬಗ್ಗೆ ದೂರವಾಣಿ ಮೂಲಕ ಮಾತುಕತೆ ನಡೆಸಲಾಗಿದೆ. ಹಾಗೂ ದ್ವಿಪಕ್ಷೀಯ ಸಹಕಾರ ಕುರಿತು ಕೂಡ ಚರ್ಚೆ ನಡೆಸಿದ್ದಾಗಿ ಡಾ.ಎಸ್.ಜೈಶಂಕರ್ ಸಾಮಾಜಿಕ ಮಾಧ್ಯಮದಲ್ಲಿ ತಿಳಿಸಿದ್ದಾರೆ.

***************

ಛತ್ತೀಸ್‌ಗಢದ ಆರು ಜಿಲ್ಲೆಗಳಲ್ಲಿ ಒಟ್ಟು 108 ಮಾವೋವಾದಿಗಳು ಶರಣಾಗತರಾಗಿದ್ದಾರೆ ಎಂದು ಗೃಹ ವ್ಯವಹಾರ ಖಾತೆ ಸಚಿವಾಲಯ ತಿಳಿಸಿದೆ.

ಇವರಲ್ಲಿ 44 ಮಹಿಳೆಯರು ಸೇರಿದ್ದಾರೆ. ಬಿಜಾಪುರ, ದಾಂತೆವಾಡ, ಸುಕ್ಮಾ, ಬಸ್ತಾರ್, ನಾರಾಯಣಪುರ ಹಾಗೂ ಕಂಕೇರ್ ಜಿಲ್ಲೆಗಳಲ್ಲಿ ಮಾವೋವಾದಿಗಳು ಜಗದಾಲ್‌ಪುರದಲ್ಲಿ ಪೊಲೀಸರಿಗೆ ಶರಣಾಗತರಾಗಿದ್ದಾರೆ.

ಈ ಮಾವೋವಾದಿಗಳ ಶೋಧಕ್ಕಾಗಿ 3 ಕೋಟಿ 95 ಲಕ್ಷ ರೂಪಾಯಿ ಬಹುಮಾನ ಘೋಷಿಸಲಾಗಿತ್ತು. ಶರಣಾಗತರಾದ ಮಾವೋವಾದಿಗಳ ಮಾಹಿತಿ ಮೇರೆಗೆ ಪೊಲೀಸರು ಕಾರ್ಯಾಚರಣೆ ನಡೆಸಿ, ಶಸ್ತ್ರಾಸ್ತ್ರ, ನಗದು ಹಾಗೂ ಚಿನ್ನವನ್ನು ವಶಪಡಿಸಿಕೊಂಡಿದ್ದಾರೆ.

***************

ಭಾರತದ ಉಕ್ಕು ಪ್ರಾಧಿಕಾರ ಕಳೆದ 11 ತಿಂಗಳಲ್ಲಿ 18 ಪಾಯಿಂಟ್ 24 ಮಿಲಿಯನ್ ಟನ್ ದಾಖಲೆಯ ಉಕ್ಕು ಮಾರಾಟ ಮಾಡಿದೆ. ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್‌ನಿಂದ ಫೆಬ್ರವರಿ ಅವಧಿಯಲ್ಲಿ ಈ ಸಾಧನೆ ಮಾಡಲಾಗಿದ್ದು, ಶೇಕಡ 14 ರಷ್ಟು ಬೆಳವಣಿಗೆ ದಾಖಲಿಸಿದೆ. ಇದೇ ಅವಧಿಯಲ್ಲಿ ಉಕ್ಕು ಪ್ರಾಧಿಕಾರ ಇದುವರೆಗಿನ ಅತ್ಯಧಿಕ ಒಂದು ಲಕ್ಷ ಕೋಟಿಗೂ ಅಧಿಕ ನಗದು ವಹಿವಾಟು ಮಾಡಿದೆ.

ಫೆಬ್ರವರಿ ತಿಂಗಳಿನಲ್ಲಿ 1 ಪಾಯಿಂಟ್ 58 ಮಿಲಿಯನ್ ಟನ್ ಉಕ್ಕು ಮಾರಾಟ ಮಾಡಲಾಗಿದೆ ಎಂದು ಉಕ್ಕು ಸಚಿವಾಲಯ ತಿಳಿಸಿದೆ.

***************

ಹೈದರಾಬಾದ್‌ನಲ್ಲಿ ಇಂದು ನಡೆಯುತ್ತಿರುವ ಎಫ್‌ಐಎಚ್ ಮಹಿಳಾ ಹಾಕಿ ವಿಶ್ವಕಪ್ 2026ರ ಅರ್ಹತಾ ಪಂದ್ಯಾವಳಿಯ ಬಿ ಗುಂಪಿನ ಅಂತಿಮ ಪಂದ್ಯದಲ್ಲಿ ಭಾರತ – ವೇಲ್ಸ್ ತಂಡಗಳು ಮುಖಾಮುಖಿಯಾಗಿವೆ.
ಈವರೆಗೆ ಅರ್ಹತಾ ಸುತ್ತಿನಲ್ಲಿ ನಾಲ್ಕು ಅಂಕಗಳೊದಿಗೆ ಬಿ ಗುಂಪಿನ ಅಂಕಪಟ್ಟಿಯಲ್ಲಿ ಭಾರತ ಅಗ್ರಸ್ಥಾನದಲ್ಲಿದೆ.
ಅಂಕಪಟ್ಟಿಯ ಅಗ್ರ ಎರಡು ತಂಡಗಳು ಸೆಮಿಫೈನಲ್‌ಗೆ ಅರ್ಹತೆ ಗಳಿಸಲಿದ್ದು, ಈ ಹಿನ್ನೆಲೆಯಲ್ಲಿ ಭಾರತ ತಂಡಕ್ಕೆ ವೇಲ್ಸ್ ತಂಡದೊಂದಿಗಿನ ಪಂದ್ಯ ಪ್ರಮುಖವಾಗಿದೆ.

***************

**ನವದೆಹಲಿಯಲ್ಲಿಂದು ವಿಶ್ವ ಪ್ಯಾರಾ ಅಥ್ಲೆಟಿಕ್ಸ್ ಗ್ರ್ಯಾಂಡ್ ಅಥ್ಲೆಟಿಕ್ಸ್ ಕ್ರೀಡಾಕೂಟ ಆರಂಭವಾಯಿತು. ಮೂರು ದಿನಗಳ ಕಾಲ ನಡೆಯಲಿರುವ ಈ ಕ್ರೀಡಾಕೂಟದಲ್ಲಿ ಭಾರತ, ರಷ್ಯಾ, ನೇಪಾಳ, ಭೂತಾನ್, ಹಾಕಾಂಗ್, ಸರ್ಬಿಯಾ, ಬೋಸ್‌ನಿಯಾ ಮತ್ತು ಈಜಿಪ್ಟ್ ದೇಶಗಳ ಕ್ರೀಡಾಪಟುಗಳು ಪಾಲ್ಗೊಳ್ಳುತ್ತಿದ್ದಾರೆ. ಒಟ್ಟು 74 ವರ್ಗಗಳಲ್ಲಿ ಕ್ರೀಡೆ ನಡೆಯಲಿದೆ.**

**2025ರಲ್ಲಿ ನಡೆದ ಈ ಕ್ರೀಡಾಕೂಟದಲ್ಲಿ ಭಾರತ ಒಟ್ಟು 134 ಪದಕಗಳನ್ನು ಗಳಿಸುವ ಮೂಲಕ ಅಗ್ರ ಸ್ಥಾನ ಪಡೆದಿತ್ತು.**

*******ಮುಕ್ತಾಯ********